

# ಮಾಂಗುಡಿಯ ಕವಿ

ಕಥೆ: **ರೇವತಿ** ಚಿತ್ರ : **ಶಂಕರ್**

**1** ಮಾಂಗುಡಿಯ ಪ್ರಖ್ಯಾತ ಕವಿ ಮರುದನಾರ್ ಮುಂದೆ ಅನೇಕ ಕವಿಗಳು ನೆರೆದಿದ್ದರು.





**2**




**3**




4
ಬನ್ನಿ, ಮಹಾಕವಿಗಳೇ. ನನ್ನ ಹೊಸ ದಂಡಯಾತ್ರೆಯ ವಿಜಯವನ್ನು ಕೊಂಡಾಡುವಂತೆ ನೀವು ಒಂದು ಕಾವ್ಯರಚನೆ ಮಾಡಿ. ನಿಮಗೆ ಒಂದು ಹೊಸ ಅವಕಾಶ.
ಮಹಾರಾಜ, ಇನ್ನೊಂದು ದಂಡಯಾತ್ರೆ ! ಅದು ಅಗತ್ಯವೆ?
ಆದರೆ ರಾಜ ಅದನ್ನು ಕಿವಿಗೆ ಹಾಕಿಕೊಳ್ಳಲಿಲ್ಲ.
5
ನಮ್ಮ ಆಸ್ಥಾನ ಕಲಾವಿದ ಮುತ್ತುಮಣಿ ರಚಿಸಿದ ಚಿತ್ರಕಲೆಗಳನ್ನು ನಾನು ನೋಡುತ್ತ ಹೋದೆ. ಅವನ ಚಿತ್ರಗಳಲ್ಲಿ ಯುದ್ಧದ ಚಿತ್ರಗಳನ್ನೆಲ್ಲ ನೋಡಿದಾಗ ನನಗೆ ಮತ್ತೆ ಯುದ್ಧ ಮಾಡುವಂತೆ ಉತ್ಸಾಹ ಚಿಮ್ಮಿ ಬರುತ್ತಿದೆ. ಅದು ಬಿರುಗಾಳಿಯಂತೆ ನನ್ನನ್ನು ಆವರಿಸಿಕೊಳ್ಳುತ್ತಿದೆ. ಮರುದನ್, ನೀನೂ ಅದನ್ನೊಮ್ಮೆ ಬಂದು ನೋಡು. ಅದನ್ನು ನೋಡಿ ನನ್ನ ವಿಷಯವನ್ನು ಕುರಿತು ಕಾವ್ಯ ರಚಿಸಲು ನಿನಗೆ ಸ್ಫೂರ್ತಿ ಬರಬಹುದು.
6
ಅಯ್ಯೋ ಮದುರೆಯ ಅಧಿಪತಿ ದೇವರೇ! ರಾಜನ ಈ ಹುಚ್ಚನ್ನು ನೀನೇ ಬಿಡಿಸಬೇಕು.
7
ಮಹಾಕವಿಗಳೆ! ನೋಡಿ ಎಂತಹ ಅದ್ಭುತ ಚಿತ್ರ ! ಅವು ಮೌನವಾಗಿ ಮಾತಾಡುವಂತಿವೆ. ಇದರ ಸನ್ನಿವೇಶಗಳು ನಮ್ಮಲ್ಲಿ ತೀವ್ರವಾದ ಭಾವನೆಯನ್ನು ಕೆರಳಿಸುವಂತೆ ಕಲಾವಿದ ಅದನ್ನು ಚಿತ್ರಿಸಿದ್ದಾನೆ. ಕಲಾವಿದರೆ! ಕಾಲವನ್ನು ಮೀರಿ ನಿಲ್ಲುವ ನಿಮ್ಮ ರಚನೆಗಳಿಗಾಗಿ ಇದೋ, ಕಾಣಿಕೆಯನ್ನು ಸ್ವೀಕರಿಸಿ.


8
ರಾಜನಿಂದ ಕಾಣಿಕೆ ಸ್ವೀಕರಿಸುವ ಮೊದಲೇ ಮುತ್ತುಮಣಿ ಪ್ರಜ್ಞೆ ತಪ್ಪಿ ಬಿದ್ದ.
ಅಯ್ಯೋ! ಮುತ್ತುಮಣಿ ಪ್ರಜ್ಞೆ ತಪ್ಪಿ ಬಿದ್ದುಬಿಟ್ಟ.!
ಯಾರಲ್ಲಿ! ರಾಜವೈದ್ಯರನ್ನು ಕರೆದುಕೊಂಡು ಬನ್ನಿ!
9
ಮಹಾರಾಜ!ಕ್ಷಮಿಸಿ. ಮುತ್ತುಮಣಿ ದೈವಾಧೀನನಾದ.
ಅಯ್ಯೋ! ಮೃತ್ಯುದೇವತೆ ಇಷ್ಟು ಬೇಗನೆ ಬಂದುಬಿಟ್ಟನೆ?
10
ಕೆಲವು ದಿನಗಳ ನಂತರ...
ಮುತ್ತುಮಣಿಯ ಮರಣ ನನ್ನನ್ನು ಪೂರ್ತಿಯಾಗಿ ಕಂಗೆಡಿಸಿದೆ. ನನಗೆ ಯಾವುದರಲ್ಲೂ ಆಸಕ್ತಿಯೇ ಇಲ್ಲದಾಗಿದೆ.
ಮಹಾರಾಜ! ಜೀವನದ ನಶ್ವರತೆ ನಿನಗರ್ಥವಾಗಿದೆ. ಆದರೆ ಅದರಿಂದ ನಾವು ಚಿಂತಿಸುತ್ತ ಕೈಕಟ್ಟಿ ಕುಳಿತುಕೊಳ್ಳಬಾರದು. ಒಳ್ಳೆಯ ಕಾರ್ಯ ಮಾಡದೆ ಸುಮ್ಮನೆ ಸಾವನ್ನೇ ಎದುರು ನೋಡುತ್ತ ಇರುವುದೆ? ನಾವು ಸತ್ಕಾರ್ಯವನ್ನು ಬೇಗ ಬೇಗ ಮಾಡಿ ಮುಗಿಸಬೇಕು. ನಶ್ವರತೆ ಇದನ್ನೇ ನಮಗೆ ನೆನಪಿಸುವುದು. ಅಷ್ಟೇ ಅಲ್ಲ.........
11
ಇನ್ನೇನು, ಕವಿಗಳೆ? ಮುಂದುವರಿಸಿ..
ಮಹಾರಾಜ! ನೀವು ಒಬ್ಬ ಮಹಾನ್ ದೊರೆ, ನಿಮಗೆ ಶತ್ರುಗಳೇ ಇಲ್ಲ. ಇದು ನಮಗೆಲ್ಲ ಹೆಮ್ಮೆಯ ವಿಷಯ. ಯುದ್ಧದಿಂದಾಗಿ ನಮ್ಮ ಜನರಿಗೆ ಇದ್ದ ಎಷ್ಟೋ ಆವಶ್ಯಕತೆಗಳು ಪೂರೈಕೆಯಾಗಿಲ್ಲ. ಆದರೆ ಜನರು ತಾಳ್ಮೆಯಿಂದ ಸಹಿಸಿಕೊಂಡಿದ್ದಾರೆ. ಈಗ ಶತ್ರುಗಳು ಯಾರೂ ಇಲ್ಲ. ಆದಕಾರಣ ಈಗ ಯುದ್ಧ ಮಾಡುವ, ದಂಡೆತ್ತಿ ಹೋಗುವ ಆಲೋಚನೆಯನ್ನು ಬಿಡಿ. ಬೇರೆ ರಾಜ್ಯಗಳನ್ನು ಸಾಮಂತರನ್ನಾಗಿ ಮಾಡುವ ಕಾರ್ಯವನ್ನು ನಿಲ್ಲಿಸಿ. ಜನರು ನಿಮ್ಮಿಂದ ಬಯಸುವುದು ಶಾಂತಿ, ನೆಮ್ಮದಿಗಳಿಂದ ತುಂಬಿದ ಆಡಳಿತವನ್ನು. ಅದನ್ನು ನೀವು ನೆರವೇರಿಸಿ.

12




13




ಇದರ ನಂತರ ಪಾಂಡ್ಯದೊರೆ ನೆಡುಂಚೆಳಿಯನ್‌ನ ರಾಜ್ಯಭಾರ ಶಾಂತಿ, ಸಮೃದ್ಧಿಗಳಿಂದ ತುಂಬಿಕೊಂಡಿತು.

14

ಮಾಂಗುಡಿ ಕವಿ ಮರುದನ್‌ನ ರಚನೆ 'ಮದುರೈ ಶಾಂತಿ'ಯ ಕೊನೆಯ ಭಾಗದಲ್ಲಿ ಪಾಂಡ್ಯ ದೊರೆಗಳ ಶೌರ್ಯ, ಪರಾಕ್ರಮಗಳೊಂದಿಗೆ ಮಾನವ ಜೀವನದ ನಶ್ವರತೆಯನ್ನೂ ಕವಿ ವರ್ಣಿಸುತ್ತಾನೆ.

15

ಜೀವನವೆಂಬುದು ನಶ್ವರ. ಬಂದು ಹೋಗುವ ಕನಸಿನಂತೆ ಇದು. ಯೌವನ, ಸೌಂದರ್ಯ ಎಲ್ಲವೂ ನಾಶವಾಗುವುವು. ಸಂಪತ್ತು ಮಾಯವಾಗುವುದು. ದೇಹ ಸೌಂದರ್ಯ ಇಲ್ಲದಾಗುವುದು. ಜೀವನವೇ ಒಣಗಿಹೋಗುವುದು. ಎಲ್ಲ ಸಾಧನೆಗಳೂ ನಾಶವಾಗುವುವು. ದೇವರೊಬ್ಬನೇ ಶಾಶ್ವತ.

– ಸ್ವಾಮಿ ವಿವೇಕಾನಂದ

